# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 16.01.2021 ರಂದು ಬೆಳಿಗ್ಗೆ 11.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆಸಿದ್ದು, ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು | |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ ಕಾರ್ಯದರ್ಶಿ, ಸಹಾಯಕ ಅಭಿಯಂತರರು |
| 3. | ಶ್ರೀ ಹನುಮಂತರಾಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಬೃಹತ್ ನೀರುಗಾಲುವೆ/ಯೋಜನಾ ವಿಭಾಗ, |
| 4. | ಶ್ರೀ ಅಂಬರೀಶ್ ಕೆ.ವಿ. ಸಂಚಾರಿ ನಿರೀಕ್ಷಕರು, ಇಬ್ಬಲೂರು ಪೋಲಿಸ್ ಠಾಣೆ |
| 5. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 6. | ಶ್ರೀ ಸತೀಶ್ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ./ ಡಬ್ಲ್ಯೂ.ಡಬ್ಲ್ಯೂ.ಎಂ. |
| 7. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್ಬಿ) |
| 8. | ಶ್ರೀ ವಿನೋದ್, ಹಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ ನಂಜೇಶ್ ಎಂ.ಆರ್ ಕಿರಿಯ ಅಭಿಯಂತರರು, ಬೆಸ್ಕಾಂ. |
| 10. | ಶ್ರೀ ಚಂದ್ರಶೇಖರ ಹೆಚ್.ಇ. ಆರ್.ಡಬ್ಲ್ಯೂ.ಎ/ ಸದಸ್ಯರು |
| 11. | ಶ್ರೀ ಬಿ.ಎಸ್.ಆರ್ ರೆಡ್ಡಿ ಆರ್.ಡಬ್ಲ್ಯೂ.ಎ/ಸದಸ್ಯರು |
| 12. | ಶ್ರೀಮತಿ ಡಾ|| ಶಾಂತಿ ಆರ್.ಡಬ್ಲ್ಯೂ.ಎ/ಸದಸ್ಯರು |
| 13. | ಶ್ರೀಮತಿ ದೀವ್ಯ ವೆಂಕಟೇಶ್, ಆರ್.ಡಬ್ಲ್ಯೂ.ಎ/ಸದಸ್ಯರು |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಹೊಸ ವರ್ಷದ ಶುಭಾಷಯಗಳು ಕೋರುತ್ತಾ,ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 1 | ಘನತ್ಯಾಜ್ಯ ನಿರ್ವಹಣೆ | • ಹೆಚ್.ಎಸ್.ಆರ್ ಬಡಾವಣೆಯ ವ್ಯಾಪ್ತಿಯ ಖಾಲಿ ನಿವೇಶನಗಳಲ್ಲಿ ಗಿಡಗಂಟೆಗಳು ಬೆಳೆದುಕೊಂಡು ಹಾವು ಹೆಗ್ಗಣ ಕ್ರಿಮಿ ಕೀಟ ಸೇರಿಕೊಂಡು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹಾಗೂ ಸದರಿ ಸ್ಥಳದಲ್ಲಿ ಕೆಲವರು ಘನತ್ಯಾಜ್ಯವನ್ನು ಅನಧಿಕೃತವಾಗಿ ಎಸೆಯುತ್ತಿರುವ ಬಗ್ಗೆ ಸದಸ್ಯರು ಸಭೆಯಲ್ಲಿ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವಂತೆ ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಪಾದಚಾರಿ ಮಾರ್ಗ, ರಸ್ತೆಯ ಬದಿ, ಖಾಲಿ ನಿವೇಶನಗಳಲ್ಲಿ, ಪಾನಿ ಪೂರಿ, ಗೋಬಿ ಮಂಚುರಿ ಮತ್ತು ಇತರೆ ಮಳಿಗೆಗಳನ್ನು ತೆರವುಗೊಳಿಸಿ **ಫುಡ್ ಸ್ಟ್ರೀಟ್** ವಲಯಕ್ಕೆ ಸ್ಥಳಾಂತರಗೊಳಿಸಲು ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಸೆಕ್ಟರ್‌ವಾರು ಖಾಲಿ ನಿವೇಶನಗಳ ಬಗ್ಗೆ ಸರ್ವೆ ಮಾಡಿ, ಸಂಬಂಧಪಟ್ಟ ಮಾಲೀಕರುಗಳಿಗೆ ತಮ್ಮ ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸಿಕೊಳ್ಳುವಂತೆ ನೋಟಿಸ್ ಜಾರಿಮಾಡಲು ಹಾಗೂ ಪಾದಚಾರಿ ಮಾರ್ಗಗಳಲ್ಲಿ ತಳ್ಳುವ ಗಾಡಿಗಳನ್ನು ಸ್ಥಳಾಂತರಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಹಿರಿಯ ಆರೋಗ್ಯ ಪರಿವೀಕ್ಷಕರು** |

Scanned with Car

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 2 | ಕಂದಾಯ | ವಾರ್ಡ್ ವ್ಯಾಪ್ತಿಯಲ್ಲಿ ವಸತಿ ವಾಣಿಜ್ಯ ಕಟ್ಟಡಗಳ ಬಾಕಿ ಉಳಿದಿರುವ ಕಂದಾಯವನ್ನು ವಸೂಲಾತಿ ಮಾಡಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಹಂತ ಹಂತವಾಗಿ ಸರ್ವೆ ನಡೆಸಿ, ವಸೂಲಾತಿ ಮಾಡಲಾಗುತ್ತಿದೆ ಎಂದು ಸಹಾಯಕ ಕಂದಾಯ ಅಧಿಕಾರಿ ರವರು ಸಭೆಯಲ್ಲಿ ಉತ್ತರಿಸಿರುತ್ತಾರೆ.<br>**ಕ್ರಮ : ಸಹಾಯಕ ಕಂದಾಯ ಅಧಿಕಾರಿ (ಹೆಚ್.ಎಸ್.ಆರ್ ಉಪವಿಭಾಗ)** |
| 2 | ತೋಟಗಾರಿಕೆ | • ವಾರ್ಡ್ ವ್ಯಾಪ್ತಿಯ ಉದ್ಯಾನವನಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿಲ್ಲ, ಆದ್ದರಿಂದ ನಿರ್ವಹಣೆ ಕಾರ್ಯವನ್ನು ಸರಿಯಾರಿ ನಿರ್ವಹಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಸ್ವತಂತ್ರ ಉದ್ಯಾನವನದಲ್ಲಿ ಸಾರ್ವಜನಿಕರಿ/ಹಿರಿಯ ನಾಗರೀಕರಿಗೆ ವಿಶ್ರಾಂತಿ ಪಡೆಯಲು ಬೆಂಚ್ ಅಳವಡಿಸುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಉದ್ಯಾನವನಗಳಲ್ಲಿ ಎಲೆ, ಕೊಂಬೆಗಳನ್ನು ಉದ್ಯಾನವನದಲ್ಲಿರುವ ನೀರಿನ ಟ್ಯಾಂಕ್‌ಗೆ ತುಂಬುತ್ತಿದ್ದು, ಇದನ್ನು ಸ್ವಚ್ಛಗೊಳಿಸುವಂತೆ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ: ತೋಟಗಾರಿಕೆ ಅಧೀಕ್ಷಕರು** |
| 3 | ಕಾಮಗಾರಿ ಇಲಾಖೆ | • ವಾರ್ಡ್ ವ್ಯಾಪ್ತಿಯ ಕೇಕ್ ವಾಲಾ ಅಡ್ಡ ರಸ್ತೆ ಮತ್ತು 7ನೇ ಸೆಕ್ಟರ್‌ನ 16ನೇ ಬಿ ಅಡ್ಡ ರಸ್ತೆಗಳನ್ನು ಡಾಂಬರೀಕರಣಗೊಳಿಸುವಂತೆ ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ.<br>• ಗೇಲ್ ಗ್ಯಾಸ್ ಸಂಸ್ಥೆ ರವರು ಗ್ಯಾಸ್ ಮಾರ್ಗಕ್ಕೆ ಅಗೆದಿರುವ ರಸ್ತೆಯನ್ನು ಯಥಾಸ್ಥಿತಿಗೆ ತರುತ್ತಿಲ್ಲವೆಂದು, ಸದರಿ ಅಗೆದಿರುವ ರಸ್ತೆಯನ್ನು ಪುನರ್ ಯಥಾಸ್ಥಿಗೆ ತರುವಂತೆ ಸದಸ್ಯರು ಸಭೆಯಲ್ಲಿ ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ವಾರ್ಡ್ ನಂ. 174** |

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

16/01/21
ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car